# ಅಯ್ಯೋ ದೇವರೇ...!

ಇದು ಆಸ್ತಿಕರು ಸುಖದುಃಖ ಸಂದರ್ಭಗಳೆರಡರಲ್ಲೂ ಸಮಾನವಾಗಿ ತೆಗೆಯುವ ಉದ್ಗಾರ. ಸಂತೋಷದಲ್ಲೂ ದೇವರನ್ನು ನೆನೆಯುತ್ತಾರೆ; ದುಃಖದಲ್ಲೂ ನೆನೆಯುತ್ತಾರೆ. ಈ ನೆನೆಯುವಿಕೆಯ ಉದ್ಗಾರ ಅಂತರಾಳದಿಂದ ಪ್ರಜ್ಞಾಪೂರ್ವಕವಾಗಿ ಚಿಮ್ಮಿದ ಆರ್ತ ಸ್ಫೋಟವೆಂದು ಬಗೆಯುವುದು ತುಸು ಕಷ್ಟವಾಗುತ್ತದೆ. 'ಅಯ್ಯೋ ದೇವರೆ' ಎಂಬ ಮಾತು ವ್ಯಕ್ತಿಯ ವೈಯಕ್ತಿಕ ಅಭಿವ್ಯಕ್ತಿಯೆಂದು ಬಗೆಯುವುದಕ್ಕಿಂತ ಅದು ಸಮುದಾಯದ ಸಾಂಪ್ರದಾಯಿಕ ನಂಬಿಕೆ. ಅಪ್ರಜ್ಞಾಪೂರ್ವಕವಾಗಿ ಅವನಲ್ಲಿ ನೆಟ್ಟಿರುವ ಉದ್ಗಾರ! ಸುಖದುಃಖಗಳಲ್ಲಿ ಈ ಬಗೆಯ ಉದ್ಗಾರ ತೆಗೆಯಬೇಕೆಂದು ತಲೆ ತಲಾಂತರದಿಂದ ವಂಶವಾಹಿಗಳಲ್ಲಿ ಬೆರೆತುಹೋಗಿರುವ ಆಸ್ತಿಕ ನೆಲೆಯ ಶಿಕ್ಷಣ ಕಲಿಸಿರುವ ಒಂದು ಅಭಿವ್ಯಕ್ತಿ ಇದೆಂದು ಭಾವಿಸಬೇಕು. ಏಕೆಂದರೆ ಹೀಗೆ ಉದ್ಗಾರ ತೆಗೆಯುವ ವ್ಯಕ್ತಿಯ ಸ್ಥಿತಿ ಸಂದರ್ಭಗಳನ್ನು ಗಮನಿಸಿದಾಗ ಅವನು ಉದ್ದೇಶ ರಹಿತವಾಗಿ, ಅವಶ್ಯಕತೆ ಇಲ್ಲದೆಯೂ ಈ ಬಗೆಯ ಸ್ವರ ಹೊರಡಿಸುವುದನ್ನು ಗಮನಿಸಬಹುದು. ಅಂದರೆ ಇದನ್ನು ಒಂದು ಸಮುದಾಯದ ಸಾಂಪ್ರದಾಯಿಕ ಆಚರಣೆ ಸ್ವರೂಪದ ಉಕ್ತಿ ಎಂದೇ ತಿಳಿಯಬೇಕು.

ಈ ಬಗೆಯ ಉದ್ಗಾರ ಎಲ್ಲ ಮತ ಸಮುದಾಯಗಳಲ್ಲೂ ಇದೆ. ಆ ಸಮುದಾಯ ನಂಬಿದ 'ದೇವರು' ಈ ಉದ್ಗಾರದ ಹಿನ್ನೆಲೆಯಲ್ಲಿ ಮೂರ್ತಗೊಂಡಿರುತ್ತಾನೆ. 'ನಂಬಿ ಕರೆದರೆ ಓ ಎನ್ನನೇ...' ಎಂಬ ನಂಬಿಕೆಯೇ ಎಲ್ಲ ಕಡೆ ಮುಖ್ಯವಾಗಿ ಕೆಲಸ ಮಾಡುತ್ತಿರುತ್ತದೆ. 'ಓ ಮೈ ಕ್ರೈಸ್ಟ್..' ಅಥವಾ 'ಅಲ್ಲಾ ಹೋ..' ಎಂಬ ಉದ್ಗಾರಗಳು ಹಿಂದೂಗಳ ಈ ಬಗೆಯ ಉದ್ಗಾರಗಳಿಗೆ ಸಮಾನಾಂತರ ಪದಗಳು. ಬೇರೆಯವರು ಮಾನಸಿಕ ಅಥವಾ ದೈಹಿಕ ಹಿಂಸೆಯನ್ನು ನೀಡುತ್ತಿರುವಾಗ ಅದನ್ನು ಅನುಭವಿಸುತ್ತಿರುವವರ ಬಾಯಲ್ಲಿ ಈ ಉದ್ಗಾರ ಸಹಜವಾಗಿ ಬರುತ್ತದೆ. ಈ ಬಗೆಯ ಕ್ರೌರ್ಯವನ್ನು ನೋಡುತ್ತಿರುವ ಹೃದಯವಂತರು ಕೂಡ ಮರುಗಿ ಈ ಉದ್ಗಾರವನ್ನು ಹೊರಡಿಸುತ್ತಾರೆ. ಇಂಥ ಸಂದರ್ಭದಲ್ಲಿ ನಂಬಿಕೆಯ ಈ ಆರ್ತತೆಯು ಅಸಹಾಯಕತನದಿಂದ ಬರುವಂಥದು. ಗಂಡ– ಹೆಂಡತಿ ಮಕ್ಕಳ ಮೇಲೆ, ಯಜಮಾನ– ದಾಸರ ಮೇಲೆ, ಪ್ರಭುತ್ವ– ಜನಸಾಮಾನ್ಯರ ಮೇಲೆ ನಡೆಸುವ ಇಂಥ ಕ್ರೌರ್ಯಗಳು ಚರಿತ್ರೆಯುದ್ದಕ್ಕೂ ಸಾಗಿ ವರ್ತಮಾನದ ಸತ್ಯವಾಗಿವೆ. ಆದರೆ ಆಸ್ತಿಕ ಹೃದಯಗಳು ನಂಬಿ ಕರೆಯುವುದನ್ನು ಮಾತ್ರ ನಿಲ್ಲಿಸಿಲ್ಲ.

ಈ ಉದ್ಗಾರ ಕೇವಲ ಆಸ್ತಿಕರನ್ನು ಮಾತ್ರ ಆವರಿಸಿಕೊಂಡಿಲ್ಲ. ಈ ಆಸ್ತಿಕ ಸಮುದಾಯದಲ್ಲಿಯೇ ಹುಟ್ಟಿ, ಅಲ್ಲೇ ಬೆಳೆದು, ಅಲ್ಲಿನ ಭಾಷಿಕ ಪರಿಕಲ್ಪನೆಗಳನ್ನೇ ತನ್ನ ಸಂವಹನ ಸಾಧ್ಯತೆಗೆ ಬಳಸಿಕೊಂಡು, ಸ್ಥಾಪಿತ ಮೌಲ್ಯಗಳನ್ನು ದೇವರನ್ನು ಮತ ಮೌಢ್ಯಗಳನ್ನು ಪ್ರಶ್ನೆ ಮಾಡಿ ವೈಚಾರಿಕ ಜಾಗೃತಿ ಮೂಡಿಸಲು ಯತ್ನಿಸುವ ವಿಚಾರವಾದಿಯೂ ಕೂಡ ತನಗರಿವಿಲ್ಲದಂತೆ ಈ ಉದ್ಗಾರವನ್ನು ಒಮ್ಮೊಮ್ಮೆ ತೆಗೆದುಬಿಡುತ್ತಾನೆ. ಅಂದ ಮಾತ್ರಕ್ಕೆ ಅವನಿಗೆ ದೇವರಲ್ಲಿ ನಂಬಿಕೆಯಿದೆ ಎಂದರ್ಥವಲ್ಲ. ಆ ಉದ್ಗಾರ ಅವನಲ್ಲಿ ಸಮುದಾಯ ನಡೆಸಿಕೊಡುವ ಕ್ರಿಯೆಯಷ್ಟೆ. ನಮ್ಮ ನಡುವಿನ ಮಹಾನ್ ವಿಚಾರವಾದಿಯಾಗಿದ್ದ ಎಚ್. ನರಸಿಂಹಯ್ಯನವರು ಈ ಬಗೆಯ ಉದ್ಗಾರವನ್ನು ಮಾಡುತ್ತಿದ್ದರು– ವಾದ ವಿವಾದಗಳನ್ನು ಮಾಡುವಾಗ, ಸಂವಾದ ನಡೆಸುವಾಗ ಮತ್ತು ಭಾವೋದ್ವೇಗಕ್ಕೆ ಒಳಗಾದಾಗ, 'ದೇವರು' ಎಂಬ ಮಹತ್ವದ ಗ್ರಂಥವನ್ನು ಬರೆದ ಎ.ಎನ್. ಮೂರ್ತಿರಾಯರು ದೇವರನ್ನು ನಂಬದವರು, ನಾಸ್ತಿಕರು. ಅವರು ಕೂಡ ದೇವರನ್ನು ನಂಬಿ ಆ ಸುಳಿಯಲ್ಲಿ ಸಿಲುಕಿ ನರಳುತ್ತಿರುವ ಆಸ್ತಿಕರಿಗೆ 'ನೀನು ಇದ್ದುದ್ದೇ ಆದರೆ ಅವರಿಗೆ ಆ ಬಗ್ಗೆ ತಿಳಿವಳಿಕೆ ನೀಡು' ಎಂದು ನಿರ್ದೇಶನ ಮಾಡಿದ್ದರು.

ಮತಪೂರ್ವ ದಿನಗಳ ಮಾನವನು ಅತೀತ ಶಕ್ತಿಗಳಲ್ಲಿ ನಂಬಿಕೆಯಿಟ್ಟಿದ್ದನು. ಅವನ ನಿಗೂಢ ಶಕ್ತಿಗಳ ನಂಬಿಕೆ ಈಗಿನಂತೆ ಮೂರ್ತಸ್ವರೂಪದ ವ್ಯಕ್ತಿ ಶಕ್ತಿಗಳಲ್ಲಿ ಆರೋಪಿತವಾಗಿರಲಿಲ್ಲ. ಅವನು ಇಂದಿನವರಿಗಿಂತ ಪ್ರಕೃತಿಗೆ ಹತ್ತಿರದವನಾಗಿದ್ದುದರಿಂದ ಅವನ ಗ್ರಹಿಕೆ ಸೂಕ್ಷ್ಮವಾಗಿತ್ತು. ಆದುದರಿಂದ ನಿಗೂಢ ಶಕ್ತಿಗಳನ್ನು ಪ್ರಕೃತಿ ಶಕ್ತಿಗಳಲ್ಲಿ ಗುರುತಿಸಲು ಪ್ರಯತ್ನಿಸಿದ. ಅವನು ಆ ಶಕ್ತಿಗಳನ್ನು ಗಾಳಿ, ಬೆಳಕು, ನೀರು, ನೆಲಗಳಲ್ಲಿ ಕಂಡುಕೊಳ್ಳುವ ತಿಳಿವಳಿಕೆಯನ್ನು ಹೊಂದಿದ್ದ. ಈ ಮೂಲಭೂತ ಪ್ರಕೃತಿ– ಅನುಭವ ಗಮ್ಯ ಶಕ್ತಿಗಳನ್ನು ಸೀಮಿತ ಆಕಾರಕ್ಕೆ ಇಳಿಸಿ ಮತಲೇಪನ ಮಾಡಿ ಹೆಸರು ನೀಡಿದ ನಂತರ ಈ ಎಲ್ಲ ಅನರ್ಥ ನಂಬಿಕೆಗಳು ಪ್ರಾರಂಭಗೊಂಡವು.

ಇಂದು ದೇವರು ಆಸ್ತಿಕರ ಮೌಢ್ಯದಲ್ಲಿ ಸಿಲುಕಿ ಪಡುತ್ತಿರುವ ಪರಿಪಾಟಲುಗಳನ್ನು ನೋಡಿದಾಗ ಅವನ ಬಗ್ಗೆ ಕನಿಕರ ಮೂಡಿ, ಸಹಜವಾಗಿಯೇ 'ಅಯ್ಯೋ ದೇವರೇ' ಎಂಬ ಉದ್ಗಾರ ಹೊರಹೊಮ್ಮುತ್ತದೆ!

**ಶಿಕಾಕು**

## ಮಾತೇ ಮುತ್ತು

★ ದುಂಬಿಯು ಆಸೆಯಿಂದ ಬಂದು ಹೂವಿನ ಮಕರಂದವನ್ನು ಹೀರಿದ ಮೇಲೆ ಅಲ್ಲಿ ನಿಲ್ಲದೆ ಹಾರಿಹೋಗುತ್ತದೆ. ದುಂಬಿಯಂಥವನು ನೀನು! ದುಷ್ಟರಲ್ಲಿ ಸ್ನೇಹವು ನೆಲೆಯಾಗಿ ನಿಲ್ಲದು.
-ರಾಮಾಯಣ

★ ಯಾರಿಗೆ ಹಣ ಮತ್ತು ವಿದ್ಯೆ ಸಮಾನವಾಗಿದೆಯೋ ಅವರ ನಡುವೆ ಮಾತ್ರ ಮದುವೆಯೂ ಸ್ನೇಹವೂ ಪ್ರಶಸ್ತ. ಹೆಚ್ಚು ಕಡಿಮೆ ಇರುವವರಲ್ಲಿ ಪ್ರಶಸ್ತವಲ್ಲ.
-ಮಹಾಭಾರತ

★ ಅದೃಷ್ಟವನ್ನು ನಂಬಬಾರದು, ಅವರವರ ಶ್ರಮದ ಮೇಲೆ ನಂಬಿಕೆ ಇಡಬೇಕು.
-ಬಿ.ಆರ್.ಅಂಬೇಡ್ಕರ್

★ ಪುಸ್ತಕದ ಅವಹೇಳನವೇ ಜ್ಞಾನದ ಕೊಲೆ.
-ಜೆ.ಜೆ.ರೊಸ್ಸೊ

★ ಅನುಭವ ಎನ್ನುವುದು ಉತ್ತೀರ್ಣತೆ ಇಲ್ಲದ ಶಿಕ್ಷಣ.
-ಸಿ.ಎನ್.ಅಣ್ಣಾದೊರೈ

★ ಕೆಲವರಿಗೆ ದುರದೃಷ್ಟದಲ್ಲಿ ಎಷ್ಟು ಪ್ರೀತಿ ಎಂದರೆ, ಅರ್ಧ ದಾರಿ ಓಡಿ ಅದನ್ನು ಎದುರುಗೊಳ್ಳುತ್ತಾರೆ!
-ಡಿ.ಜೆರಾಲ್ಡ್

★ ಇನ್ನೊಬ್ಬನ ದುರದೃಷ್ಟ ನಿನ್ನ ವಿವೇಕ ಹೆಚ್ಚಿಸದು.
-ರಷ್ಯಾ ಗಾದೆ

★ ಎಲ್ಲೋ ಹುಡುಕಿದೆ ಇಲ್ಲದ ದೇವರ, ಕಲ್ಲು ಮಣ್ಣುಗಳ ಗುಡಿಯೊಳಗೆ. ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ.
-ಜಿ.ಎಸ್.ಶಿವರುದ್ರಪ್ಪ

★ ಕಷ್ಟದಲ್ಲಿ ಯಾವನು ಆಗುವನೋ ಅವನೇ ಮಿತ್ರ. ಯಾರು ಭಕ್ತಿಯನ್ನು ಹೊಂದಿದ್ದಾನೆಯೋ ಅವನೇ ಮಗ. ಯಾವನು ವಿಧೇಯತೆ ಅರಿತಿದ್ದಾನೆಯೋ ಅವನೇ ಸೇವಕ. ಸಂತೋಷ ಉಂಟು ಮಾಡುವವಳೇ ಹೆಂಡತಿ.
-ಪಂಚತಂತ್ರ

★ ಹಿತವನ್ನು ಬಯಸುವವರೂ, ಸ್ನೇಹಿತರೂ ಆದವರ ಮಾತನ್ನು ಯಾರು ಕೇಳುವುದಿಲ್ಲವೋ ಅವನಿಗೆ ವಿಪತ್ತು ಸನ್ನಿಹಿತ. ಆ ಮನುಷ್ಯ ಶತ್ರುಗಳಿಗೆ ಸಂತೋಷ ಉಂಟುಮಾಡುತ್ತಾನೆ.
-ಹಿತೋಪದೇಶ

★ ಸಂಸಾರ ಯಾರಿಗಿಲ್ಲ? ದೇಶದ ಸಂಸಾರದಲ್ಲಿ ಬೆರೆತವನೇ ನಿಜವಾದ ಮನುಷ್ಯ.
-ರಂ.ಶ್ರೀ.ಮುಗಳಿ

★ ಯಾರಲ್ಲಿ ಧನ ಇದೆಯೋ ಅವನು ಕುಲೀನನು, ಪಂಡಿತನು, ಗುಣವಂತನು, ಮಾತುಗಾರನು, ದಾರ್ಶನಿಕನೂ ಆಗಿರುತ್ತಾನೆ! ಯಾಕೆಂದರೆ ಎಲ್ಲ ಗುಣಗಳೂ ಧನವನ್ನು ಆಶ್ರಯಿಸುತ್ತವೆ!
-ಭರ್ತೃಹರಿ

★ ಹಣೆಯ ಮೇಲೆ ಗಂಧವನ್ನೋ, ವಿಭೂತಿಯನ್ನೋ ಹಚ್ಚಿಕೊಳ್ಳಿ– ನೀವು ಹಿಂದೂಗಳಾಗಿಬಿಡುತ್ತೀರಿ. ಶಿಲುಬೆ ಹಾಕಿಕೊಳ್ಳಿ– ಕ್ರೈಸ್ತರಾಗುತ್ತೀರಿ. ಟೊಪ್ಪಿಯ ಮೇಲೆ ಅರ್ಧ ಚಂದ್ರ ಧರಿಸಿದರೆ ಮುಸ್ಲಿಮರಾಗುತ್ತೀರಿ. ಹೀಗೆ ಧಾರ್ಮಿಕರಾಗುವುದು ಸುಲಭ. ಆದರೆ ನಾವು ಆಧ್ಯಾತ್ಮಿಕ ವ್ಯಕ್ತಿಗಳಾಗಬೇಕೇ ಹೊರತು, ಬರಿಯ ಧಾರ್ಮಿಕರಾಗುವುದಲ್ಲ.
-ಸ್ವಾಮಿ ರಂಗನಾಥಾನಂದ

★ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮವನ್ನು ತಾವೇ ಕಂಡುಕೊಳ್ಳಬೇಕು. ಧರ್ಮದ ದಾರಿ ಒಂದಲ್ಲ, ಹಲವು.
-ಕೆ.ಎಂ.ಮುನ್ಷಿ

★ ಸಂತೋಷದಿಂದ ಮೋಕ್ಷಕ್ಕೊಯ್ಯುವ ಸೇತುವೆ– ಧರ್ಮ. ಆದುದರಿಂದಲೇ ಅದರ ಒಂದು ಕಾಲು ಸಂಸಾರದಲ್ಲಿ! ಮತ್ತೊಂದು ಮೋಕ್ಷದಲ್ಲಿ!
-ವಿನೋಬಾ ಭಾವೆ